ನೀರಾವರಿ ಕಛೇರಿ ಸ್ಥಳಾಂತರ.

971(1397) ಡಾ: ಎಂ. ಮಹೇಶ್‌ಚಂದ್ (ಮದ್ದೂರು) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮದ್ದೂರು ತಾಲ್ಲೂಕಿನಲ್ಲಿ ವಿಶ್ವೇಶ್ವರಯ್ಯ ಆಧುನೀಕರಣ ಯೋಜನೆಗೆ ರೂ. 5 ಕೋಟಿಗಳ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡ ಮೇಲೆ ಮದ್ದೂರಿನಲ್ಲಿದ್ದ ಈ ಕಛೇರಿಯ ಕಿರುಗಾವರಿಗೆ ಸ್ಥಳಾಂತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಪುನಃ ಸದರಿ ಕಛೇರಿಯನ್ನು ಮದ್ದೂರಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :—

1.ಬಂದಿದೆ.

2. ನಂಜಾಪುರ ಏತ ನೀರಾವರಿ ಯೋಜನೆ ಪುರಿಗಾಲಿ ಏತ ನೀರಾವರಿ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ನೀರಿನ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುವ ಸಲುವಾಗಿ ಮದ್ದೂರಿನಲ್ಲಿದ್ದ ಒಂದು ಉಪ ವಿಭಾಗವನ್ನು ಕಿರುಗಾವಲಿಗೆ ಸ್ಥಳಾಂತರಿಸಲಾಗಿದೆ. ಈ ಉಪವಿಭಾಗವು ಪ್ರಮುಖ ನೀರಾವರಿ ಕಾಮಗಾರಿಗಳನ್ನು 1999-2000ನೇ ಇಸವಿಯಲ್ಲಿ ನಿರ್ವಹಿಸಬೇಕಾಗಿರುವುದರಿಂದ ಈ ಉಪ ವಿಭಾಗವನ್ನು 1-4-99 ರಿಂದ ಉಳಿಸಿಕೊಳ್ಳಲಾಗುವುದೆಂದು, ಇಲ್ಲದಿದ್ದಲ್ಲಿ, ಮತ್ತೊಂದು ಉಪವಿಭಾಗವನ್ನು ಮದ್ದೂರಿಗೆ ಸ್ಥಳಾಂತರಿಸಲಾಗುವುದು.

ಪೋಲೀಸ್ ಇಲಾಖೆಯ ಸಿ ಅಂಡ್ ಆರ್ ನಿಯಮಗಳು.

972(1412) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೆಪ್ಟೆಂಬರ್ 94ರ ಸಿ ಅಂಡ್ ಆರ್ ರೂಲ್ಸ್ ಪ್ರಕಾರವಾಗಿ ಪೊಲೀಸ್ ಇಲಾಖೆಯಲ್ಲಿ ನೇಮಕಾತಿಗಳು ನಡೆಯುತ್ತಿದೆಯೇ;

ಆ) ಈ ಅಧಿಸೂಚನೆ ಮೇರೆಗೆ ನೇಮಕಾತಿಯಲ್ಲಿ ಶೇ. 15 ರಷ್ಟನ್ನು ಸಿ.ಎ.ಆರ್. ಡಿ.ಎ.ಆರ್.ನಲ್ಲಿರುವ ಅರ್ಹ ಅಭ್ಯರ್ಥಿಗಳಿಗಾಗಿ ಮೀಸಲಿಡಲಾಗಿದೆಯೇ;

ಇ) ಹಾಗಿದ್ದಲ್ಲಿ, ನೇರ ನೇಮಕಾತಿಯಲ್ಲಿ ಭರ್ತಿ ಮಾಡಲಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು;

ಈ) ಸಿ.ಎ.ಆರ್. ಮತ್ತು ಡಿ.ಎ.ಆರ್.ನಲ್ಲಿರುವ ಅರ್ಹ ಅಭ್ಯರ್ಥಿಗಳಿಗಾಗಿ ಕಾಯ್ದಿರಿಸಲಾದ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಹೌದು

ಆ) ಹೌದು

ಇ) ನೇರ ನೇಮಕಾತಿ ಮೂಲಕ ಒಟ್ಟು 4,499 ಸಿವಿಲ್ ಪೊಲೀಸ್ ಪೇದೆಗಳನ್ನು 1994ರ ನಂತರ ತುಂಬಲಾಗಿದೆ.

ಈ) ಸಿ.ಎ.ಆರ್ ಮತ್ತು ಡಿ.ಎ.ಆರ್.ನಲ್ಲಿರುವ ಅಭ್ಯರ್ಥಿಗಳಿಗಾಗಿ ಒಟ್ಟು 355 ಹುದ್ದೆಗಳನ್ನು ಮೀಸಲಿಡಲಾಗಿದೆ.

ಸ್ವಾತಂತ್ರ ಹೋರಾಟಗಾರರಿಗೆ ಮಾಸಾಶನ.

972(1346) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗೋವಾ ವಿಮೋಚನೆಗೆ ಹೋರಾಟ ಮಾಡಿದ ಸಂತ್ರಸ್ತರಿಗೆ ಮಾಸಾಶನ ಕೊಡುತ್ತಿದ್ದುದು ನಿಜವೆ.

ಆ) ಹಾಗಿದ್ದಲ್ಲಿ ಅದನ್ನು ಈಗ ನಿಲ್ಲಿಸಲು ಕಾರಣವೇನು.

ಇ) ಇದನ್ನು ಪುನರ್ ಪರಿಶೀಲಿಸಿ ಕೊಡಲು ನಿರ್ಧಾರ ತೆಗೆದುಕೊಳ್ಳಲಾಗುವುದೆ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ಹೌದು

ಆ) ಗೋವಾ ಗೌರವಧನ ಮಂಜೂರಾತಿ ಯೋಜನೆಯು ಸಮರ್ಪಕವಾಗಿ ಕೆಲಸ ನಿರ್ವಹಿಸದ ಕಾರಣದ ಮೇರೆಗೆ ದಿನಾಂಕ : 19-4-95 ರಿಂದ ಜಾರಿಗೆ ಬರುವಂತೆ ಈ ಯೋಜನೆಯನ್ನು ಸರ್ಕಾರವು ಹಿಂತೆಗೆದುಕೊಂಡಿದೆ.

ಇ) ಇಲ್ಲ.

ತುಂಗಾ ಮೇಲ್ದಂಡೆ ಯೋಜನೆ.

974(1468) ಶ್ರೀ ಕುನಾಮೂರು ಮಂಜುನಾಥ್ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತುಂಗಾ ಮೇಲ್ದಂಡೆ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಯಿತು?

2. ಸದರಿ ಯೋಜನೆಯ ಅಂದಾಜು ವೆಚ್ಚ ಎಷ್ಟು ಹಾಗೂ ಆ ಬಗ್ಗೆ ಈವರೆಗೆ ಮಾಡಿದ ವೆಚ್ಚ ಎಷ್ಟು?